ದಿನಾಂಕ ೩–೮–೧೯೮೯ರಂದು ಮಹಾ ನಿರ್ದೇಶಕರು ಮತ್ತು ಪೋಲೀಸ್ ಮಹಾ ನಿರೀಕ್ಷಕರ ಕಚೇರಿಯಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಪೋಲೀಸ್ ಅಧಿಕಾರಿಗಳ ಸಭೆಯು ನಡೆದು ವೀರಪ್ಪನ್ ಮತ್ತು ತಂಡದವರ ಚಟುವಟಿಕೆಗಳನ್ನು ತಡೆಗಟ್ಟಲು ಹಾಗೂ ಎಂ.ಎಂ. ಬೆಟ್ಟದ ಅರಣ್ಯ ಸಂಪತ್ತಿನ ನಿರ್ಮೂಲನವನ್ನು ನಿಲ್ಲಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ಸಂಶಯಾಸ್ಪದವಾಗಿ ಚಲಿಸುವಂತ ಅಪರಿಚಿತರು ಹಾಗೂ ಕಳ್ಳ ಸಾಗಾಣಿಕೆದಾರರ ಬಗ್ಗೆ ಮಾಹಿತಿ ನೀಡಲು ದಿಂಬಂ ಮತ್ತು ಪಾಲಾರ ಚೆಕ್ ಪೋಸ್ಟ್‌ನಲ್ಲಿ ವೈರ್‌ಲೆಸ್ ಉಪಕರಣಗಳನ್ನು ಸ್ಥಾಪಿಸಲಾಗಿದೆ. ವೀರಪ್ಪನ್ ತಂಡದವರಿಗೆ ಸಹಾಯ ಮಾಡುತ್ತಿರುವಂತಹ ಶಂಕಿತ ವ್ಯಕ್ತಿಗಳ ಚಟುವಟಿಕೆಗಳನ್ನು ಮತ್ತು ಚಲನವಲನಗಳನ್ನು ಪೋಲೀಸರು ಹಿಡಿತಗೊಳಿಸುವ ಸಲುವಾಗಿ ಗೋಪಿನಾಥಂ ಗ್ರಾಮದಲ್ಲಿ ಮತ್ತೊಂದು ವೈರ್‌ಲೆಸ್ ಉಪಕರಣಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

೨) ಪೋಲೀಸ್ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿಯೊಡನೆ ಸಹಕರಿಸಲು ಎಂ ಎಂ ಬೆಟ್ಟ ಪ್ರದೇಶದಲ್ಲಿ ಕೆ.ಎಸ್.ಆರ್.ಪಿ. ಡಿವಿಆರ್ ಸಿಬ್ಬಂದಿಯನ್ನು ನೇಮಿಸಲಾಗಿದೆ.

೩) ಕರ್ನಾಟಕ ಮತ್ತು ತಮಿಳುನಾಡು ಪೋಲೀಸ್ ಅಧಿಕಾರಿಗಳು ಜಂಟಿಯಾಗಿ ವೀರಪ್ಪನ್ ತಂಡದವರನ್ನು ಸದಬಡಿಯಲು ಸೂಕ್ತ ಕ್ರಮ ಕೈಗೊಂಡಿದ್ದು ದಿನಾಂಕ ೪–೧–೧೯೯೦ ಹಾಗೂ ೫–೧–೧೯೯೦ ರಂದು ಸತತವಾಗಿ ಹೋರಾಟ ನಡೆಸಿದ್ದು ಇಬ್ಬರು ಕಳ್ಳಸಾಗಾಣಿಕೆದಾರರು ಮಡಿದಿದ್ದು ಎರಡು ಜನ ಪೋಲೀಸ್ ಸಿಬ್ಬಂದಿಯವರು ತೀವ್ರವಾಗಿ ಗಾಯಹೊಂದಿರುತ್ತಾರೆ.

ದಿನಾಂಕ ೭–೩–೧೯೯೦ ರಂದು ಮುಖ್ಯ ಕಾರ್ಯದರ್ಶಿಯವರ ಕಚೇರಿಯಲ್ಲಿ ಗೃಹ ಆಯುಕ್ತರು, ಒಳಾಡಳಿತ ಇಲಾಖೆಯ ವಿಶೇಷ ಕಾರ್ಯದರ್ಶಿ, ಡಿ.ಜಿ. ಮತ್ತು ಐಜಿಪಿ ಹಾಗೂ ಪ್ರಿನ್ಸಿಪಾಲ್ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಡಿಐಜಿ (ಅರಣ್ಯ) ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಕೊಳ್ಳೇಗಾಲ ಇವರೊಡನೆ ಈ ಬಗ್ಗೆ ಸಭೆ ನಡೆದು ಇದುವರೆಗೆ ಕೈಗೊಂಡ ಕ್ರಮವನ್ನು ತಿಳಿಸಿ ಕೆಲವು ಸಲಹೆಗಳನ್ನು ಅರಣ್ಯ ಹಾಗೂ ಪೋಲೀಸ್ ಅಧಿಕಾರಿಗಳು ನೀಡಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸಂಬಂಧಪಟ್ಟ ಅಭಿವೃದ್ಧಿ ಇಲಾಖೆಯೊಡನೆ ವ್ಯವಹರಿಸಿ ಮುಂದಿನ ಕ್ರಮ ಕೈಗೊಳ್ಳುವತ್ತ ಮುಖ್ಯ ಕಾರ್ಯದರ್ಶಿಯವರು ಕಾರ್ಯ ನಿರತರಾಗಿದ್ದಾರೆ.

೬ ರಾಜ್ಯದ ಅಂಗನವಾಡಿ ಕಾರ್ಯಕರ್ತರ ಹಾಗೂ ಸಹಾಯಕಿಯವರ ಸೇವಾ ಹಿರಿತನವನ್ನು ಪರಿಗಣಿಸಿ ವೇತನವನ್ನು ಕೊಡಲು ಒತ್ತಾಯ

ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕಿಯರ ಸೇವಾ ಹಿರಿತನವನ್ನು ಪರಿಗಣಿಸಿ ಅವರ ಸೇವಾ ಪುಸ್ತಕವನ್ನು ತೆರೆಯುವಂತೆ ಹಾಗೂ ಅಂಗನವಾಡಿ ಕಾರ್ಯಕರ್ತರನ್ನು ಮತ್ತು ಸಹಾಯಕಿಯರನ್ನು ಖಾಯಂ ಗೊಳಿಸಿ ಕೆಲಸಕ್ಕೆ ಸಮಾನವಾದ ವೇತನವನ್ನು ಕೊಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ವಾರ್ತಾ ಪ್ರಸಾರ, ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ಇದು ಆರೋಗ್ಯ ಮಂತ್ರಿಗಳಿಗೆ ಸೇರುತ್ತದೆ. ಅವರ ಗಮನಕ್ಕೆ ಈ ವಿಚಾರವನ್ನು ತರಲಾಗುತ್ತದೆ.

ಛೇರ್ಮನ್.—ಶ್ರೀ ರಮಾನಾಥ ರೈ ಗೈರ ಹಾಜರಿ.

ಶ್ರೀ ಗೋಪಾಲ ಮಯ್ಯಂದ ಕಾನಡೆ (ಸದಸ್ಯರು ಗೈರು ಹಾಜರಿ)

೭. ದಿನಾಂಕ ೩–೩–೯೦ ರಂದು ಶ್ರೀ ಸಿ. ಕೆ. ಕೃಷ್ಣಮೂರ್ತಿಯವರು ತಮ್ಮ ಅಂಗಡಿ ಯಿಂದ ಕಾಣೆಯಾಗಿರುವುದು.

ಶ್ರೀಮತಿ ರೇಣುಕಾ ರಾಜೇಂದ್ರನ್ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ದಿನಾಂಕ ೩–೩–೧೯೯೦ ರಂದು ಶ್ರೀ ಸಿ. ಕೆ. ಕೃಷ್ಣಮೂರ್ತಿಯವರು ತಮ್ಮ ಅಂಗಡಿಯಿಂದ ಕಾಣೆಯಾಗಿರುವ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ದಿನಾಂಕ ೩ನೇ ಮಾರ್ಚ್ ೧೯೯೦ ರಂದು ಶ್ರೀ ಸಿ. ಎ. ಕೃಷ್ಣಮೂರ್ತಿ ಎಂಬುವವರು ಶ್ರೀ ವಿನೋದ್ ಕುಮಾರ್ ಎಂಬುವವರು